- ಬೃಹತ್ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ.
- ಸಣ್ಣ ಮತ್ತು ಅತೀ ಸಣ್ಣ ಪೂರಕ ಜವಳಿ ಘಟಕಗಳಿಗೆ ಅನುಕೂಲಕರ ವಾತಾವರಣ.
- ಜವಳಿ ಮತ್ತು ಸಿದ್ಧ ಉಡುಪು ಘಟಕಗಳ ಭೌಗೋಳಿಕವಾಗಿ ವಿಸ್ತರಿಸುವುದು.
- ಯಾದಗಿರಿಯಲ್ಲಿ ಜವಳಿ ಪಾರ್ಕ್ ಉದ್ದೇಶಕ್ಕಾಗಿ ಕೆ.ಐ.ಎ.ಡಿ.ಬಿ ಯಿಂದ 1000 ಎಕರೆ ಜಮೀನನ್ನು ಮೀಸಲಿರಿಸಿದೆ.

ಇ)

- ದಿನಾಂಕ: 21.11.2014 ರಂದು ಸರ್ಕಾರದ ಮಟ್ಟದಲ್ಲಿ ಬೃಹತ್ ಕೈಗಾರಿಕೆಗಳ ಹೂಡಿಕೆದಾರರ ಸಭೆಯನ್ನು ಕರೆದು ಯಾದಗಿರಿ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿಸುವ ಘಟಕ/ಪಾರ್ಕ್‌ಗಳಿಗೆ ನೂತನ ಜವಳಿ ನೀತಿ 2013–18 ರಡಿ ಹೂಡಿಕೆದಾರರಿಗೆ ಇರುವ ಪ್ರೋತ್ಸಾಹನಗಳ ತಿಳುವಳಿಕೆ ನೀಡಲಾಗಿದೆ.
- ಬೃಹತ್ ಬಂಡವಾಳ ಹೂಡಿಕೆದಾರರನ್ನು ಗುರುತಿಸಲಾಗುತ್ತಿದೆ.
- ಉದ್ಯಮಶೀಲರನ್ನು ಗುರುತಿಸಿ ಎಸ್.ಪಿ.ವಿ ರಚನೆ ಪ್ರಗತಿಯಲ್ಲಿದೆ.
- ಕೈಗಾರಿಕೆಗೆ ಬೇಕಾದ ಜಮೀನನ್ನು ಕೆ.ಐ.ಎ.ಡಿ.ಬಿ ಯಿಂದ ಸ್ವಾಧೀನ ಪಡೆದು ಅಭಿವೃದ್ಧಿ ಪಡಿಸುವ ಕೆಲಸ ಪ್ರಗತಿಯಲ್ಲಿದೆ.

ಕ್ರೀಡಾಂಗಣವನ್ನು ಮಂಜೂರು ಮಾಡುವುದು

938 (447); **ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ (ರೋಣ**

ಅ) ಕ್ರೀಡಾಂಗಣವನ್ನು ಮಂಜೂರು ಮಾಡಲು ಇರುವ ಸರ್ಕಾರದ ಮಾನದಂಡಗಳೇನು?

ಆ) ವೇಗವಾಗಿ ಬೆಳೆಯುತ್ತಿರುವ ನಗರ ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿದ್ದಂತಹ ಸ್ಥಳಗಳಿಗೆ ಹೊಸದಾಗಿ ಕ್ರೀಡಾಂಗಣವನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಗದಗ ಜಿಲ್ಲೆ ರೋಣ ತಾಲ್ಲೂಕಿನ ಗಜೇಂದ್ರಗಡ ಮತ್ತು ನರೇಗಲ್ ಪಟ್ಟಣಕ್ಕೆ ಕ್ರೀಡಾಂಗಣ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಕೆ. ಅಭಯ ಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಕ್ರೀಡಾಂಗಣವನ್ನು ಮಂಜೂರು ಮಾಡಲು ಸರ್ಕಾರದ ಹಂತದಲ್ಲಿರುವ ಮಾನದಂಡಗಳು ಈ ಕೆಳಗಿನಂತಿವೆ.

1. ಕನಿಷ್ಠ 8.00 ಎಕರೆ ಸಮತಟ್ಟಾದ ಜಮೀನಿನ ಲಭ್ಯತೆ ಇರಬೇಕು ಮತ್ತು ಇಲಾಖೆಯ ಹೆಸರಿಗೆ ಹಸ್ತಾಂತರಗೊಂಡಿರಬೇಕು.
2. ಜನವಸತಿ ಪ್ರದೇಶಕ್ಕೆ ಹತ್ತಿರದಲ್ಲಿರಬೇಕು.
3. ನಿವೇಶನವು ರಸ್ತೆಗೆ ಹೊಂದಿಕೊಂಡಂತಿರಬೇಕು.
4. ನಿವೇಶನದಲ್ಲಿ ನೀರಿನ ಲಭ್ಯತೆ ಇರಬೇಕು.

ಆ) ವೇಗವಾಗಿ ಬೆಳೆಯುತ್ತಿರುವ ನಗರ ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿದ್ದಂತಹ ಸ್ಥಳಗಳಿಗೆ ಹೊಸದಾಗಿ ಕ್ರೀಡಾಂಗಣವನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರದ ಮುಂದಿದೆ.

ಇ) ಗದಗ ಜಿಲ್ಲೆ ರೋಣ ತಾಲ್ಲೂಕಿನ ಗಜೇಂದ್ರಗಡ ಮತ್ತು ನರೇಗಲ್ ಪಟ್ಟಣಕ್ಕೆ ಕ್ರೀಡಾಂಗಣ ಮಂಜೂರು ಮಾಡುವ ಯಾವುದೇ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ.